**ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,**
ದೇವರಾಜ ಅರಸ್ ಮಾರ್ಕೆಟ್, ಹಾಸನ. ☐ 264825

| ವಾರ್ಷಿಕ ಬಡ್ಡಿ ದರದ ವಿವರಗಳು | ಸಾಮಾನ್ಯರಿಗೆ % | ಹಿರಿಯ ನಾಗರಿಕರಿಗೆ % |
|---|---|---|
| * 1 ವರ್ಷದಿಂದ 3 ವರ್ಷಗಳವರೆಗೆ | 10.5 | 11 |
| * 181 ದಿನಗಳಿಂದ 365 ದಿನಗಳವರೆಗೆ | 8 | 8.5 |
| * 91 ದಿನಗಳಿಂದ 180 ದಿನಗಳವರೆಗೆ | 7 | 7.5 |
| * 31 ದಿನಗಳಿಂದ 90 ದಿನಗಳವರೆಗೆ | 6 | 6.5 |
| * 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ | | |

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ



# ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ

ವ್ಯವಸ್ಥಾಪಕ ಸಂಪಾದಕ : ಎಸ್.ಎನ್.ಮಂಜುನಾಥದತ್ತ



PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner




### ಪಾರ್ವತಮ್ಮ ಪಾರ್ಥೀವ ಶರೀರದ ಮೇಲೆ ರಾಷ್ಟ್ರಧ್ವಜ : ದೂರು ದಾಖಲು

ಕಳೆದ ಬುಧವಾರ ನಿಧನರಾದ ವರನಟ ಡಾ.ರಾಜ್‌ಕುಮಾರ್ ಅವರ ಪತ್ನಿ ಹಾಗೂ ನಿರ್ಮಾಪಕಿ ಪಾರ್ವತಮ್ಮ ರಾಜ್‌ಕುಮಾರ್(78) ಅವರ ಪಾರ್ಥೀವ ಶರೀರದ ಮೇಲೆ ರಾಷ್ಟ್ರಧ್ವಜ ಹೊದಿಸಿದ್ದನ್ನು ವಿರೋಧಿಸಿ ಬೆಂಗಳೂರಿನ ವಿಜಯನಗರದ ವಕೀಲ ಚೇತನ್ ಶುಕ್ರವಾರ ಸರ್ಕಾರದ ವಿರುದ್ಧ ಖಾಸಗಿ ದೂರು ದಾಖಲಿಸಿದ್ದಾರೆ. ರಾಷ್ಟ್ರಧ್ವಜ ನಿಯಮ 5ರನ್ವಯ ಕಾನೂನು ಉಲ್ಲಂಘನೆಯಾಗಿದೆ ಎಂದು ಅವರು ದೂರಿನಲ್ಲಿ ಆರೋಪಿಸಿದ್ದಾರೆ.



### 'ಜಿಎಸ್‌ಟಿ ಜಾರಿಗೊಳಿಸಿದರೆ ಚಿತ್ರರಂಗಕ್ಕೆ ಗುಡ್‌ಬೈ'

ಚಿತ್ರೋದ್ಯಮದ ಮೇಲೂ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಿಧಿಸುತ್ತಿರುವುದರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ದಕ್ಷಿಣ ಭಾರತದ ಖ್ಯಾತ ನಟ ಕಮಲ್ ಹಾಸನ್, ಸಿನಿಮಾ ಟಿಕೆಟ್ ಮೇಲಿನ ಜಿಎಸ್‌ಟಿಯನ್ನು ಮರು ಪರಿಶೀಲಿಸುವಂತೆ ಒತ್ತಾಯಿಸಿದ್ದಾರೆ. ಸಿನಿಮಾ ಕ್ಷೇತ್ರದ ಮೇಲೆ ಶೇ.28ರಷ್ಟು ಜಿಎಸ್‌ಟಿ ಜಾರಿಗೊಳಿಸಿದರೆ ತಾವು ಸಿನಿಮಾ ರಂಗಕ್ಕೆ ಗುಡ್ ಬೈ ಹೇಳುವುದಾಗಿ ಎಚ್ಚರಿಸಿದ್ದಾರೆ.



### ದೆಹಲಿ ಸಿಎಂ ಕೇಜ್ರಿವಾಲ್ ವಿರುದ್ಧ ಮೂರು ಎಫ್‌ಐಆರ್ ದಾಖಲು

ಲೋಕೋಪಯೋಗಿ ಇಲಾಖೆಯಲ್ಲಿನ ಹಗರಣಕ್ಕೆ ಸಂಬಂಧಿಸಿದಂತೆ ದೆಹಲಿ ಸಿ.ಎಂ. ಅರವಿಂದ ಕೇಜ್ರಿವಾಲ್ ಹಾಗೂ ಇತರರ ವಿರುದ್ಧ 3 ಪ್ರತ್ಯೇಕ ಎಫ್‌ಐಆರ್ ದಾಖಲಿಸಿರುವುದಾಗಿ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ಶುಕ್ರವಾರ ಕೋರ್ಟ್‌ಗೆ ತಿಳಿಸಿದೆ. ಭ್ರಷ್ಟಾಚಾರ ವಿರೋಧಿ ಹೋರಾಟಗಾರ ರಾಹುಲ್ ಶರ್ಮಾ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಎಸಿಬಿ ಮೆಟ್ರೊಪೊಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಈ ಮಾಹಿತಿ ನೀಡಿದೆ.


ಜನತಾಮಾಧ್ಯಮ ಬೆಳಗಿನ ದೈನಿಕ | JANATHAMADHYAMA | KARKAN. RNI 41566. | ಸಂಪುಟ : 40 | ಸಂಚಿಕೆ :206 | ಶನಿವಾರ | ಜೂ.3, 2017 | ದೂರವಾಣಿ : 268494 | ಪುಟ-4 | ರೂ.2-00 | NO. HSN-761/ 2015-17


# ಚನ್ನಪಟ್ಟಣ ಕೆರೆ ಅಭಿವೃದ್ಧಿ ಹೆಸರಿನಲ್ಲಿ ಮಣ್ಣು ಪಾಲಾದ 6.32 ಕೋಟಿ ರೂ.

## ☐ ಜನಪ್ರತಿನಿಧಿಗಳಿಗೆ ಇಚ್ಛಾಶಕ್ತಿಯ ಕೊರತೆ ☐ ಚಕಾರ ಎತ್ತದೆ ಮೌನವಾಗಿರುವ ಪ್ರತಿಪಕ್ಷಗಳು

☐ ವೆಂಕಟೇಶ್

**ಹಾಸನ : ಅಭಿವೃದ್ಧಿ ಹೆಸರಿನಲ್ಲಿ ಕೋಟಿಗಟ್ಟಲೇ ಹಣ ಲೂಟಿಯಾಗುತ್ತಿರುವುದು ಬೆಳಕಿಗೆ ಬರುತ್ತಲೇ ಇದೆ. ಇಂಥ ಪ್ರಕರಣಗಳು ಜಿಲ್ಲೆಯಲ್ಲಿ ಹತ್ತಾರು ನಡೆದಿವೆ. ಈಗ ಚನ್ನಪಟ್ಟಣ ಕೆರೆ ಅಭಿವೃದ್ಧಿ ಹೆಸರಿನಲ್ಲಿ 6.32 ಕೋಟಿ ರೂ. ಹಣ ಮಣ್ಣುಪಾಲಾಗಿದೆ.**

ಇತಿಹಾಸ ಪ್ರಸಿದ್ಧ ಚನ್ನಪಟ್ಟಣ ಕೆರೆ ಪುನಶ್ಚೇತನಕ್ಕೆ 7.97 ಕೋಟಿ ರೂ. ವೆಚ್ಚದಲ್ಲಿ ಯೋಜನೆ ರೂಪಿಸಲಾಗಿತ್ತು. ಆದರೆ ಯೋಜನೆ ಮಾತ್ರ ಫಲಪ್ರದವಾಗಲೇ ಇಲ್ಲ. ಯೋಜನೆಯ ಹೆಸರಿನಲ್ಲಿ ಹಣವನ್ನು ಲೂಟಿ ಮಾಡಲಾಗಿದೆ. ಇಷ್ಟಾದರೂ ಹೇಳುವವರು ಕೇಳುವವರು ಯಾರೂ ಇಲ್ಲದಂತಾಗಿದೆ.

ಖರ್ಚಾಗಿರುವ ಹಣಕ್ಕೆ ಲೆಕ್ಕವೂ ಇಲ್ಲ. ಎಲ್ಲಾ ರಾಮನ ಲೆಕ್ಕ , ಕೃಷ್ಣನ ಲೆಕ್ಕ. ಹಿಂದೆ ಚನ್ನಪಟ್ಟಣ ಕೆರೆ ಅಭಿವೃದ್ಧಿಗೋಸ್ಕರ ಯೋಜನೆ ರೂಪಿಸಲಾಯಿತು. ಆದರೆ ಆಗಿದ್ದು ಮಾತ್ರ ಶೂನ್ಯ. ಅಭಿವೃದ್ಧಿ ಹೆಸರಿನಲ್ಲಿ ಹಗರಣ ನಡೆದಿದ್ದರೂ ಪ್ರಜ್ಞಾವಂತರ್‍ಯಾರೂ ಈವರೆಗೂ ಚಕಾರ ಎತ್ತುತ್ತಿಲ್ಲ.

ಹಿಂದಿನ ಸರ್ಕಾರ ಹಾಗೂ ಈಗಿನ ಸರ್ಕಾರಗಳಿಗೆ ಇದರ ಬಗ್ಗೆ ಚಿಂತಿಸಲು ಸಮಯವೇ ಇಲ್ಲ. ಇನ್ನು ವಿರೋಧ ಪಕ್ಷದವರಾದರೂ ಧ್ವನಿ ಎತ್ತಬೇಕಿತ್ತು. ಪ್ರತಿಪಕ್ಷದವರ ಧ್ವನಿ ಕ್ಷೀಣಿಸಿ ಹೋಗಿದೆ. ಇದೊಂದು ಅನ್ಯಾಯದ ಪರಮಾವಧಿ.

ಇತಿಹಾಸ ಪ್ರಸಿದ್ಧ ಚನ್ನಪಟ್ಟಣ ಕೆರೆ ಈಗ ನೀರಿಲ್ಲದೆ ಸೊರಗುತ್ತಿದೆ. ಇದಕ್ಕೆ ನೀರು ತುಂಬಿಸಿ ಅಭಿವೃದ್ಧಿಪಡಿಸಲು ಆಲೋಚಿಸಲಾಗಿತ್ತು. ಬದುಗಳ ನಿರ್ಮಾಣ, ತಂತಿ ಬೇಲಿ, ಬೃಂದಾವನ ಮಾದರಿಯಲ್ಲಿ ಗಾರ್ಡನ್, ಬೋಟಿಂಗ್ ವ್ಯವಸ್ಥೆ ಹೀಗೆ ಹತ್ತಾರು ಯೋಜನೆಗಳಿದ್ದವು. ಆದರೆ ಈಗ ಇವ್ಯಾವೂ ಕಾರ್ಯಗತವಾಗಿಲ್ಲ.

### ಅಂಕಿ ಅಂಶ

**159.39** ಮೂಲ ಎಕರೆ

**28** ಗುಂಟೆ ಪ್ರಾಧಿಕಾರಕ್ಕೆ

**15** ಗುಂಟೆ ಜನತಾ ಟ್ರಸ್ಟ್‌ಗೆ

**23.20** ಎಕರೆ ಕೆ.ಎಸ್.ಆರ್.ಟಿ.ಸಿ.ಗೆ

- ☐ ಬಾಲಭವನಕ್ಕೆ -10 ಎಕರೆ
- ☐ ಹೆಚ್‌ಪಿಸಿಎಲ್‌ಗೆ-8 ಎಕರೆ
- ☐ ಪ್ರಾಧಿಕಾರಕ್ಕೆ-19 ಗುಂಟೆ
- ☐ ರೈಲ್ವೆ ಇಲಾಖೆಗೆ-8 ಎಕರೆ
- ☐ ಇಸ್ಕಾನ್‌ಗೆ ಮಂಜೂರಾಗಿದ್ದ 8 ಎಕರೆ ವಾಪಸ್
- ☐ 1.5 ಎಕರೆ ರೈಲ್ವೆ ಇಲಾಖೆಯಿಂದ ವಾಪಸ್



### ಧೂಳು ಹಿಡಿಯುತ್ತಿರುವ ಕಡತ

ಚನ್ನಪಟ್ಟಣ ಪುನಶ್ಚೇತನ ಯೋಜನೆಯ ಕಡತ ಧೂಳು ಹಿಡಿಯುತ್ತಿದೆ ಎಂದರೆ ನಂಬುತ್ತೀರಾ? ಹೌದು, ಜಿಲ್ಲಾ ನಗರಾಭಿವೃದ್ಧಿ ಕೋಶದಲ್ಲಿ ಕಳೆದ ಮೂರು ತಿಂಗಳಿನಿಂದಲೂ ಈ ಕಡತ ಧೂಳು ಹಿಡಿಯುತ್ತಿದೆ. ಪ್ರಾಧಿಕಾರಕ್ಕೆ ಕಡತ ವರ್ಗಾವಣೆ ಮಾಡಲಾಗುವುದು ಎಂದು ಸಿಬ್ಬಂದಿ ಹತ್ತಾರು ದಿವಸದಿಂದಲೂ ಹೇಳುತ್ತಲೇ ಇದ್ದಾರೆ. ಆದರೆ ಆ ಕೆಲಸವಾಗಿಲ್ಲ.

ಚನ್ನಪಟ್ಟಣ ಕೆರೆಯನ್ನು ಒಡೆದು ಒಡಲನ್ನು ಬರಿದು ಮಾಡಲಾಯಿತು. ಅಲ್ಲಿ ಬಸ್ ನಿಲ್ದಾಣ ಕೂಡ ನಿರ್ಮಾಣವಾಯಿತು. ಪರಿಸರವಾದಿಗಳು ಮತ್ತು ಪ್ರಗತಿಪರರು ಹೋರಾಟ ರೂಪಿಸಿದ ಫಲವಾಗಿ ಕೆರೆಯಲ್ಲಿ ನೀರು ಉಳಿಸಿ ಅಭಿವೃದ್ಧಿಪಡಿಸಲು ನಿರ್ಧರಿಸಲಾಯಿತು. 2007ರ ಅವಧಿಯಲ್ಲಿ ಯೋಜನೆ ಕೂಡ ರೂಪಿತವಾಯಿತು. ಸಣ್ಣ ನೀರಾವರಿ ಇಲಾಖೆ ಯೋಜನೆ ರೂಪಿಸುವ ಹೊಣೆ ಹೊತ್ತಿತ್ತು. ನಗರಾಭಿವೃದ್ಧಿ ಪ್ರಾಧಿಕಾರದ ಉಸ್ತುವಾರಿಯಲ್ಲಿ ಕಾಮಗಾರಿ ಕೂಡ ಆರಂಭವಾಯಿತು. ಆದರೆ ಗುತ್ತಿಗೆದಾರ ಮಾತ್ರ ಕೆಲಸ ಆರಂಭಿಸಲೇ ಇಲ್ಲ. ಚನ್ನಪಟ್ಟಣ ಕೆರೆಯ ನೀರು ತುಂಬಲಿಲ್ಲ. ಸರ್ಕಾರದ ಬೊಕ್ಕಸಕ್ಕೆ ಮಾತ್ರ ಹೊಡೆತ ಬಿದ್ದಿತು. ನಿಖರವಾಗಿ ತನಿಖೆ ನಡೆಸಿದರೆ ಅಧಿಕಾರಿಗಳು ಜೈಲು ಸೇರಬೇಕಾಗುತ್ತದೆ. ಕಂಟ್ರಾಕ್ಟರ್ ಕೂಡ ಶಿಕ್ಷೆಗೆ ಒಳಗಾಗುತ್ತಾನೆ. ತನಿಖೆಗೆ ಶಿಫಾರಸ್ಸು ಮಾಡುವವರ್‍ಯಾರು?

### ಹುಚ್ಚು ಮದ್ವೇಲಿ ಉಂಡವನೇ ಜಾಣ

ಹುಚ್ಚು ಮದ್ವೇಲಿ ಉಂಡವನೇ ಜಾಣ ಎಂಬುದನ್ನು ಕೇಳಿದ್ದೀರಾ? ಈ ಯೋಜನೆಯೂ ಹಾಗೆಯೇ ಆಗಿದೆ. 159.39 ಎಕರೆ ವಿಸ್ತೀರ್ಣ ಚನ್ನಪಟ್ಟಣ ಕೆರೆಯದ್ದು. ಆದರೆ ಇದನ್ನು ಹರಿದು ಹಂಚಲಾಗಿದೆ. ಈಗ ಹೆಚ್ಚೂ ಕಡಿಮೆ 100 ಎಕರೆಯಷ್ಟು ಜಾಗ ಉಳಿತಾಯವಾಗಲಿದೆ ಎಂದು ಜಿಲ್ಲಾಡಳಿತದ ಮೂಲಗಳೇ ಸ್ಪಷ್ಟಪಡಿಸಿವೆ.

ಆದರೆ ಉಳಿದಿರುವ ಜಾಗದಲ್ಲಿ ಅಭಿವೃದ್ಧಿಯೇ ನಡೆದಿಲ್ಲ. ಬೋಟಿಂಗ್ ವ್ಯವಸ್ಥೆಯಾದರೆ ಪ್ರವಾಸೋದ್ಯಮವನ್ನು ಆಕರ್ಷಿಸಬಹುದೆಂಬ ಲೆಕ್ಕಾಚಾರ ಹಾಕಲಾಗಿದೆ. ಆದರೆ ಬೋಟಿಂಗ್ ವ್ಯವಸ್ಥೆ ಮರೀಚಿಕೆಯಾಯಿತು. ಬದುಗಳ ನಿರ್ಮಾಣವಾಗಲಿಲ್ಲ. ಸುತ್ತ ತಂತಿ ಬೇಲಿ ನಿರ್ಮಾಣವಾಗಲಿಲ್ಲ.

ತಣ್ಣೀರುಹಳ್ಳದಿಂದ ಹರಿದು ಬರುವ ನೀರನ್ನು ಚೆಕ್‌ಡ್ಯಾಂ ನಿರ್ಮಿಸಿ ಶೇಖರಣೆ ನಂತರ ಯೋಗ್ಯವಾದ ನೀರನ್ನು ಕೆರೆಗೆ ನೀರು ತುಂಬಿಸಲಾಗುವುದು ಎಂದು ಯೋಜನೆಯಲ್ಲಿ ಪ್ರಸ್ತಾಪವಾಗಿದೆ. ಆದರೆ ಯಾವ ಚೆಕ್‌ಡ್ಯಾಂಗಳೂ ನಿರ್ಮಾಣವಾಗಲಿಲ್ಲ. ಕಲುಷಿತ ನೀರು ಹರಿದು ಬರುತ್ತಲೇ ಇದೆ.

### ಏನಿದು ಯೋಜನೆ?

ಯೋಜನಾ ವೆಚ್ಚ : 7.97 ಕೋಟಿ

ಖರ್ಚಾಗಿರುವುದು : 6.32 ಕೋಟಿ

### ಕೆರೆಯ ಒತ್ತುವರಿ?

159.39 ಎಕರೆ ವಿಸ್ತೀರ್ಣದ ಚನ್ನಪಟ್ಟಣ ಕೆರೆಯ ಒಡಲು ಈಗ ಬರಿದಾಗಿದೆ. ಆಡುವಳ್ಳಿ ವ್ಯಾಪ್ತಿಯಲ್ಲಿ 59 ಎಕರೆ, ಹಾಸನ ವ್ಯಾಪ್ತಿಯ 61.3 ಎಕರೆ, ಚನ್ನಪಟ್ಟಣದ 19.13 ಎಕರೆ ಹಾಗೂ ಬೊಮ್ಮನಾಯಕನಹಳ್ಳಿಯ 19.27 ಎಕರೆ ಈ ವ್ಯಾಪ್ತಿಯಲ್ಲಿ ಬರುತ್ತದೆ. ಆದರೆ ಅಭಿವೃದ್ಧಿ ಹೆಸರಿನಲ್ಲಿ ವಿಸ್ತೀರ್ಣ ಚಿಕ್ಕದಾಗಿದೆ. ಅಷ್ಟಿದ್ದರೆ ಒಪ್ಪಿಕೊಳ್ಳಬಹುದಿತ್ತು. ಆ ಬಗ್ಗೆ ತಕರಾರು ಇರುತ್ತಿರಲಿಲ್ಲ. ಚನ್ನಪಟ್ಟಣ ಕೆರೆ ಅಚ್ಚುಕಟ್ಟು ಪ್ರದೇಶವನ್ನು ನಿರಂತರವಾಗಿ ಒತ್ತುವರಿ ಮಾಡಲಾಗುತ್ತಿದೆ. ಆದರೆ ಒತ್ತುವರಿ ತೆರವು ಕಾರ್ಯ ಮಾತ್ರ ಆಗಲೇ ಇಲ್ಲ. ಮಾಹಿತಿಯ ಪ್ರಕಾರ ಇಲ್ಲಿ ಕೆಲವು ಖಾಸಗಿಯವರು ಒತ್ತುವರಿ ಮಾಡಿಕೊಂಡಿದ್ದಾರೆ. 100 ಎಕರೆ ವಿಸ್ತೀರ್ಣ ಇಲ್ಲವೇ ಇಲ್ಲ. ಸರ್ವೆ ನಡೆಸಿದರೆ ಪಕ್ಕಾ ಮಾಹಿತಿ ಸಿಗುತ್ತದೆ.

### ಆ ಗುತ್ತಿಗೆದಾರ ಯಾರು?

ಪತ್ರಿಕೆ ಈ ಪ್ರಮಾಣದಲ್ಲಿ ಲೂಟಿಗೆ ಕಾರಣವಾದ ಕಂಟ್ರಾಕ್ಟರ್‌ನ ಜಾಡನ್ನು ಪರಿಶೀಲಿಸಲು ಹೊರಟಿತು. ನಮ್ಮ ಅಧಿಕಾರಿಗಳು ಜಾಣ ಕುರುಡರು. ಏನೇ ಪ್ರಶ್ನಿಸಿದರೂ ಗುಟ್ಟು ಬಿಟ್ಟು ಕೊಡುವುದಿಲ್ಲ. ಪತ್ರಿಕೆಗೆ ದೊರೆತ ಮಾಹಿತಿಯ ಪ್ರಕಾರ ಪ್ರಾಧಿಕಾರದವರೇ ಕಂಟ್ರಾಕ್ಟರ್‌ನ್ನು ನೇಮಕ ಮಾಡಿದ್ದಾರೆ. ಆದರೆ ಈಗಿನ ಅಧಿಕಾರಿ ಗಳಿಗೆ ಏನೂ ಗೊತ್ತಿಲ್ಲವಂತೆ! ಏನೇ ಪ್ರಶ್ನಿಸಿದರೂ ಅವರಿಂದ ಉತ್ತರ ದೊರೆಯಲಿಲ್ಲ. ಪತ್ರಿಕೆ ಇಷ್ಟಕ್ಕೆ ಸುಮ್ಮನಾಗಲಿಲ್ಲ. ಜಾಡು ಹಿಡಿಯುತ್ತಾ ಹೊರಟಿತು. ಆಗ ಪ್ರಾಧಿಕಾರದಲ್ಲಿ ಎಇಇ ಆಗಿದ್ದವರು ಈಗ ಚಿಕ್ಕಮಗಳೂರು ಪ್ರಾಧಿಕಾರದಲ್ಲಿದ್ದಾರೆ. ಅವರಿಗೆ ಸಂಪೂರ್ಣ ವಿವರ ಗೊತ್ತಿದೆ ಎಂಬ ಉತ್ತರ ದೊರಕಿತು. ಮಾಹಿತಿ ತೆಗೆದುಕೊಳ್ಳುವುದು ಕಷ್ಟವೋ ಕಷ್ಟ!

### ಸ್ವಾಗತಾರ್ಹ ಬೆಳವಣಿಗೆ

ಚನ್ನಪಟ್ಟಣ ಕೆರೆ ಪುನಶ್ಚೇತನಕ್ಕೆ ಸಂಬಂಧಿಸಿದಂತೆ ಪತ್ರಿಕೆ ಈಗ್ಗೆ ಮೂರು ವರ್ಷಗಳ ಹಿಂದೆ ಸ್ಫೋಟಕ ವರದಿಯನ್ನು ಪ್ರಕಟಿಸಿತ್ತು. ಆಗ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಯೋಜನೆಯ ಹಿಂದೆ ಬಿದ್ದಿದ್ದರು. ಒಂದೆರಡು ದಿನ ಚರ್ಚೆಯೂ ನಡೆಯಿತು. ನಂತರ ಯೋಜನೆ ವೇಗ ಪಡೆದುಕೊಳ್ಳಲಿಲ್ಲ.

ಈಗ ಹಿರಿಯ ನಾಗರಿಕರ ವೇದಿಕೆ ಚನ್ನಪಟ್ಟಣ ಕೆರೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಧ್ವನಿ ಎತ್ತಿದೆ. ಶನಿವಾರ ಚನ್ನಪಟ್ಟಣ ಕೆರೆಗೆ ತೆರಳಿ ವಸ್ತುಸ್ಥಿತಿ ಪರಿಶೀಲಿಸುವುದಾಗಿಯೂ ಹೇಳಿದೆ. ಇದೊಂದು ನಿಜಕ್ಕೂ ಸ್ವಾಗತಾರ್ಹ ಬೆಳವಣಿಗೆ.

### ರೋಸಿ ಹೋದ ಜನ

ಹಲವು ಪ್ರಜ್ಞಾವಂತರು ಮಾತ್ರ ಚನ್ನಪಟ್ಟಣ ಕೆರೆ ಅಭಿವೃದ್ಧಿ ಏನಾಯಿತು ಎಂದು ಪ್ರಶ್ನಿಸುತ್ತಲೇ ಇದ್ದಾರೆ. ಆದರೆ ಉತ್ತರ ಸಿಕ್ಕಿಲ್ಲ. ಕಡತವೇ ಧೂಳು ಹಿಡಿಯುತ್ತಿರುವುದರಿಂದ ಇನ್ನೆಲ್ಲಿಯ ಉತ್ತರ? ಜನರು ಈ ವ್ಯವಸ್ಥೆಯಿಂದ ರೋಸಿ ಹೋಗಿದ್ದಾರೆ. ಈ ಕುರಿತು ಮಾಹಿತಿಯನ್ನೂ ನೀಡುವುದಿಲ್ಲ. ಒಂದಿಬ್ಬರು ಆರ್.ಟಿ.ಐ. ಅಡಿ ಮಾಹಿತಿಗಾಗಿ ಅರ್ಜಿ ಹಾಕಿದ್ದಾರೆ. ಜಿಲ್ಲಾಧಿಕಾರಿಗಳು ಹೊಸಬರು. ಅವರಿಗೆ ಹೆಚ್ಚಿನ ವಿವರ ಗೊತ್ತಿಲ್ಲ.

### ಇತಿಹಾಸವಂತೂ ಕ್ಷಮಿಸದು



ಚನ್ನಪಟ್ಟಣ ಕೆರೆಯನ್ನು ಅಭಿವೃದ್ಧಿಪಡಿಸಿ ನೀರು ನಿಲ್ಲಿಸದಿದ್ದರೆ ಇತಿಹಾಸವಂತೂ ಈ ಜನಪ್ರತಿನಿಧಿಗಳನ್ನು ಕ್ಷಮಿಸದು. ಚನ್ನಪಟ್ಟಣ ಕೆರೆ ಒಡಲು ಬರಿದಾಗಿರುವುದರಿಂದ ನಗರದ ಸುತ್ತಮುತ್ತ ಅಂತರ್ಜಲ ಬತ್ತಿ ಹೋಗಿದೆ. ಮುಂದಿನ ಪೀಳಿಗೆಯವರು ವ್ಯವಸ್ಥೆಯನ್ನು ಅಣಕಿಸುತ್ತಾರೆ. ಈಗಲಾದರೂ ನಮ್ಮ ಜನಪ್ರತಿನಿಧಿಗಳು ಕೆರೆ ಅಭಿವೃದ್ಧಿಪಡಿಸುವತ್ತ ಆಲೋಚಿಸುವರೇ? ಕಾದು ನೋಡೋಣ.

## 'ದೇವೇಗೌಡರನ್ನು ಟೀಕಿಸುವ ಹಕ್ಕು ಯಾರಿಗೂ ಇಲ್ಲ'

ಹಾಸನ : ದೇವೇಗೌಡರು ಜಿಲ್ಲೆಗೆ ಸಾಕಷ್ಟು ಕೆಲಸಗಳನ್ನು ಮಾಡಿದ್ದಾರೆ. ಅವುಗಳ್ಯಾವುವನ್ನೂ ಅವರು ತಮ್ಮ ಸ್ವಂತಕ್ಕೆ ಮಾಡಿಕೊಂಡದ್ದಲ್ಲ. ಆದರೂ ಕೆಲವರು ಇತ್ತೀಚಿನ ದಿನಗಳಲ್ಲಿ ರಾಜಕೀಯ ಉದ್ದೇಶಕ್ಕಾಗಿ ಗೌಡರನ್ನು ಟೀಕಿಸುವ ಮಟ್ಟಕ್ಕೆ ಇಳಿದಿದ್ದಾರೆ. ಯಾರೇ ಆದರೂ ಟೀಕಿಸುವಾಗ ಅವರ ಹಿರಿತನ ಹಾಗೂ ರಾಜಕೀಯ ಅನುಭವಕ್ಕೆ ಗೌರವ ಕೊಡಬೇಕು ಎಂದು ಬೇಲೂರು ತಾಲ್ಲೂಕಿನ ಜೆಡಿಎಸ್ ಮುಖಂಡ ಅನಂತಸುಬ್ಬರಾಯ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೇಲೂರು ತಾಲ್ಲೂಕಿನ ಯಗಚಿ ಅಣೆಕಟ್ಟನ್ನು ಪ್ರಾರಂಭಿಸಿದವರು ರಾಮಕೃಷ್ಣ ಹೆಗಡೆಯವರು. ಇದು ಹೊಳೆನರಸೀಪುರಕ್ಕೆ ನೀರು ಹರಿಸಲು ದೇವೇಗೌಡರು ಮಾಡಿದ ಕೆಲಸವೆಂದು ಸುಳ್ಳು ಆಪಾದನೆ ಮಾಡಲಾಗುತ್ತಿದೆ. ಇದೊಂದು ಶುದ್ಧ ಸುಳ್ಳು. ಯಗಚಿ ನಾಲೆಯಿಂದ ಸುಮಾರು 84 ವಿತರಣಾ ನಾಲೆಗಳನ್ನು ಅಳವಡಿಸಲಾಗಿದೆ. ಇದರಿಂದ ಜಿಲ್ಲೆಯ 121 ಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಇದನ್ನು ಗಮನಿಸದೆ ಕೆಲವು ರಾಜಕೀಯ ನಾಯಕರು ದೇವೇಗೌಡರನ್ನು ಗುರಿಯಾಗಿಸುವುದು ಸರಿಯಲ್ಲ ಎಂದರು.



ಹೊಳೆನರಸೀಪುರದಲ್ಲಿಯೇ ಈ ಬಾರಿ 20ಕ್ಕೂ ಹೆಚ್ಚು ಕೆರೆಗಳು ಬತ್ತಿ ಹೋಗಿವೆ. ಅದೇ ರೀತಿ ಆಲೂರಿನಲ್ಲಿ 7, ಹಾಸನದಲ್ಲಿ 40 ಹಾಗೂ ಬೇಲೂರಿನಲ್ಲಿ 25 ಕೆರೆಗಳು ಬತ್ತಿ ಹೋಗಿವೆ. ಕುಡಿಯುವ ನೀರಿನ ಬವಣೆ ನೀಗಿಸುವ ಸಲುವಾಗಿ ಬೇಲೂರಿನ ಕೆರೆಗಳನ್ನು ತುಂಬಿಸುವ ಕೆಲಸ ಮಾಡಲಾಗುತ್ತಿದೆ. ಇಷ್ಟೆಲ್ಲಾ ಆಗುತ್ತಿದ್ದರೂ ಗೌಡರ ವಿರುದ್ಧ ಜನರಿಗೆ ವಿರೋಧಿ ಭಾವನೆ ಬರುವಂತೆ ಮಾಡುವ ಉದ್ದೇಶದಿಂದ ವಿರೋಧ ಪಕ್ಷಗಳ ನಾಯಕರು ಇಲ್ಲಸಲ್ಲದ ಆರೋಪವನ್ನು ಗೌಡರ ಮೇಲೆ ಹೊರಿಸುತ್ತಿದ್ದಾರೆ ಎಂದು ಆರೋಪಿಸಿದರು.

ಜೆಡಿಎಸ್ ಮುಖಂಡ ಬೇಲೂರು ಲಿಂಗೇಶ್ ಮಾತನಾಡಿ, ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಜೆಡಿಎಸ್ ಪಕ್ಷವು ಎಲ್ಲಾ 8 ಸ್ಥಾನಗಳನ್ನೂ ಗೆಲ್ಲಲಿದೆ. ಅದಕ್ಕಾಗಿ ಎಲ್ಲಾ ವಿಭಾಗಗಳ ಸಮಿತಿಗಳನ್ನು ಪುನರ್ ರಚಿಸಲಾಗುವುದು ಎಂದರು.

ಜಿಲ್ಲೆಯ ಉಸ್ತುವಾರಿಗಳಾಗಿ ಕೆ.ಆರ್.ಪೇಟೆಯ ಶ್ರೀನಿವಾಸ್ ಆಗಮಿಸಿದ್ದು, ರಾಜ್ಯಾಧ್ಯಕ್ಷ ಹೆಚ್.ಡಿ.ಕುಮಾರಸ್ವಾಮಿಯವರ ಮಾರ್ಗದರ್ಶನದಂತೆ ಎಲ್ಲಾ ತಾಲ್ಲೂಕುಗಳಿಗೂ ಭೇಟಿ ನೀಡಿ ಮುಂದಿನ ಸಂಘಟನೆಯ ಬಗ್ಗೆ ಮಾಹಿತಿ ಕಲೆ ಹಾಕಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿ.ಪಂ. ಮಾಜಿ ಉಪಾಧ್ಯಕ್ಷ ಎಸ್.ದ್ಯಾವೇಗೌಡ, ತಾ.ಪಂ. ಅಧ್ಯಕ್ಷ ಸತೀಶ್ ಇನ್ನಿತರರು ಹಾಜರಿದ್ದರು.

### ನಗರದಲ್ಲಿಂದು ಹಿರಿಯ ನಾಗರಿಕರ ಸಭೆ

ಹಾಸನ : ಚನ್ನಪಟ್ಟಣ ಕೆರೆ ಪುನಶ್ಚೇತನ ಹಾಗೂ ಸತ್ಯವಂಗಲ ಕೆರೆಗೆ ನೀರು ತುಂಬಿಸುವ ಕುರಿತು ಚರ್ಚಿಸಲು ಜೂನ್ 3ರ ಬೆಳಿಗ್ಗೆ 10.30ಕ್ಕೆ ನಗರದ ಎಂ.ಜಿ.ರಸ್ತೆಯಲ್ಲಿರುವ ವಿಶ್ವೇಶ್ವರಾಯ ಭವನದಲ್ಲಿ ಹಿರಿಯ ನಾಗರಿಕರ ಸಭೆ ಕರೆಯಲಾಗಿದೆ.

### ನಗರದಲ್ಲಿ ಇಂದು ದುಂಡು ಮೇಜಿನ ಸಭೆ

ಹಾಸನ : ಜಾನುವಾರು ಹತ್ಯೆಗಾಗಿ ಮಾರಾಟ ನಿಷೇಧ ಕಾನೂನಿನ ಅಪಾಯಗಳ ಕುರಿತು ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಜೂನ್ 3ರಂದು ಶನಿವಾರ ಬೆಳಿಗ್ಗೆ 11ಕ್ಕೆ ಆರ್.ಸಿ.ರಸ್ತೆಯ 'ಶ್ರಮ' ಕಛೇರಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದಿಂದ ದುಂಡು ಮೇಜಿನ ಸಭೆ ಕರೆಯಲಾಗಿದೆ.

### ☐ ಜಿಲ್ಲಾ ಉಸ್ತುವಾರಿ ಸಚಿವರ ಸರ್ವಾಧಿಕಾರಿ ಧೋರಣೆ : ಶಾಸಕ ಪ್ರಕಾಶ್ ಕಟು ಟೀಕೆ

## ಜೂ.18ರಂದು ಸಿ.ಎಂ. ಕಾರ್ಯಕ್ರಮದ ವೇಳೆ ಧರಣಿ ಎಚ್ಚರಿಕೆ

ಹಾಸನ : ಜಿಲ್ಲಾ ಉಸ್ತುವಾರಿ ಮಂತ್ರಿಗಳು ಬೇಜವಾಬ್ದಾರಿತನದಿಂದ ವರ್ತಿಸುತ್ತಿದ್ದಾರೆ ಎಂದು ಟೀಕಿಸಿರುವ ಹಾಸನ ವಿಧಾನಸಭಾ ಕ್ಷೇತ್ರದ ಶಾಸಕ ಹೆಚ್.ಎಸ್.ಪ್ರಕಾಶ್, ಅವರು ತಮ್ಮ ನಡವಳಿಕೆ ಬದಲಿಸಿಕೊಳ್ಳದಿದ್ದರೆ ಜೂನ್ 18ರಂದು ನಗರಕ್ಕೆ ಆಗಮಿಸುವ ಮುಖ್ಯಮಂತ್ರಿಗಳ ಕಾರ್ಯಕ್ರಮದ ವೇಳೆ ನಗರಸಭಾ ಸದಸ್ಯರೊಂದಿಗೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರೋತ್ಥಾನ ಯೋಜನೆಯ ಮೂಲಕ ನಗರದ ಅಭಿವೃದ್ಧಿಗೆ ಸರ್ಕಾರವು ಹಣ ಬಿಡುಗಡೆ ಮಾಡಿದೆ. ಇದು ಮುಖ್ಯಮಂತ್ರಿಗಳ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿಗಾಗಿ ನೀಡಿರುವ ಹಣವಾಗಿದೆ. 2015-16ನೇ ಸಾಲಿನಲ್ಲಿ 35 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು, ಅಮೃತ್ ಯೋಜನೆಗೆ 10 ಕೋಟಿ ರೂ. ಕೊಡಲಾಗಿದೆ. ನಗರಾಭಿವೃದ್ಧಿಗೆ ಕೊಟ್ಟಿರುವ ಹಣದಲ್ಲಿ ಪರಿಶಿಷ್ಟರ ಅಭಿವೃದ್ಧಿಗೆ 17.15 ಕೋಟಿ ರೂ. ಹಾಗೂ ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ 6.95 ಕೋಟಿ ರೂ.ಗಳನ್ನು ವಿನಿಯೋಗಿಸಬೇಕು. 7 ಕೋಟಿ ರೂ. ಅಮೃತ್ ಯೋಜನೆಗಾದರೆ, ಉಳಿದ ಹಣವನ್ನು ಸರ್ಕಾರದ ಸುತ್ತೋಲೆಯಂತೆ ಖರ್ಚು ಮಾಡಬೇಕು. ಆದರೆ ಸಚಿವರು ಒಂದೇ ಕಾಮಗಾರಿಗೆ ಉಳಿದ ಹಣವನ್ನು ಬಳಸುತ್ತಿದ್ದಾರೆ. ಅಲ್ಲದೆ ನಗರಸಭೆಯ ಸದಸ್ಯರು ಹಾಗೂ ಶಾಸಕರನ್ನು ನಿರ್ಲಕ್ಷಿಸಿ ಉಳಿದ ಹಣವನ್ನು ರಸ್ತೆ ಅಗಲೀಕರಣಕ್ಕೆ ಬಳಸುತ್ತಿದ್ದಾರೆ ಎಂದು ದೂರಿದರು.



ಸಹ್ಯಾದ್ರಿ ವೃತ್ತದ ಅಗಲೀಕರಣಕ್ಕಾಗಿ 3 ಕೋಟಿ ರೂ. ಬಳಸುತ್ತಿದ್ದಾರೆ. ಸರ್ಕಾರದ ಸುತ್ತೋಲೆ ಪ್ರಕಾರ ರಸ್ತೆ ಅಭಿವೃದ್ಧಿಗೆ ಹಣ ಬಳಸಬಹುದು. ಆದರೆ ಅದಕ್ಕಾಗಿ ಬಳಸಲ್ಪಟ್ಟ ಭೂ ಅಕ್ರಮಕ್ಕೆ ಪರಿಹಾರದ ಹಣವಾಗಿ ಬಳಸುವಂತಿಲ್ಲ. ಆದರೂ ಸಚಿವರು ಇದಕ್ಕೆ ಹಣ ಬಳಸುತ್ತಿದ್ದಾರೆ. ಅಲ್ಲದೆ ನಗರದ ವಿವಿಧ ಕಡೆಗಳಲ್ಲಿ ಆಗಬೇಕಾದ ಕೆಲಸಗಳಿಗೆ ಬಳಸಬೇಕಾಗಿದ್ದ ಹಣವನ್ನು ಕೇವಲ ಎರಡು ಕೆಲಸಗಳಿಗೆ ಬಳಸುತ್ತಿರುವುದು ಇವರ ರಾಜಕೀಯ ದುರುದ್ದೇಶವನ್ನು ಪ್ರತಿಬಿಂಬಿಸುತ್ತದೆ ಎಂದು ಸಚಿವರ ನಡೆಯನ್ನು ಖಂಡಿಸಿದರು.

ಸಚಿವರಿಗೆ ರಸ್ತೆಗಳನ್ನು ಸರಿಪಡಿಸುವ ಹಂಬಲವಿದ್ದರೆ ನಗರೋತ್ಥಾನ ಹಣವನ್ನು ಬಿಟ್ಟು ಮಹಾಮಸ್ತಕಾಭಿಷೇಕದ ಅನುದಾನದಲ್ಲಿ ಅಭಿವೃದ್ಧಿಪಡಿಸಲಿ. ಅವರೇ ಕ್ಯಾಬಿನೆಟ್ ಸಚಿವರಾಗಿರುವುದರಿಂದ ವಿಶೇಷ ಅನುದಾನ ತಂದು ಅಭಿವೃದ್ಧಿ ಮಾಡಲಿ ಎಂದರು.

ನಗರಾಭಿವೃದ್ಧಿಗೆ ಸರ್ಕಾರವು ನೀಡಿರುವ ಹಣವನ್ನು ತಮ್ಮ ಸ್ವ ವಿವೇಚನೆಯಿಂದ ಒಂದೇ ಕಾಮಗಾರಿಗೆ ಬಳಸುತ್ತಿರುವುದು ಮತ್ತು ಇತರ ಪಕ್ಷಗಳ ಜನಪ್ರತಿನಿಧಿಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಉದ್ಧಟತನ ಪ್ರದರ್ಶಿಸುವುದನ್ನು ಖಂಡಿಸಿ ಮುಖ್ಯಮಂತ್ರಿ ಆಗಮನದ ದಿನದಂದು ಪ್ರತಿಭಟನೆ ನಡೆಸುವುದು ಅನಿವಾರ್ಯವಾಗಿದೆ ಎಂದು ಹೇಳಿದರು.

## ಗೋಹತ್ಯೆ ನಿಷೇಧ ವಾಪಸ್‌ಗೆ ಒತ್ತಾಯ



ಹಾಸನ : ದೇಶದಾದ್ಯಂತ ಜಾನುವಾರು ಮಾರಾಟ ನಿಷೇಧಿಸಿದ ಕೇಂದ್ರ ಸರಕಾರವು ಹೊರಡಿಸಿರುವ ಅಧಿಸೂಚನೆಯನ್ನು ಕೂಡಲೇ ಹಿಂಪಡೆಯುವಂತೆ ಆಗ್ರಹಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಸಂಘಟನೆ ಜಿಲ್ಲಾಧಿಕಾರಿ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ ನಡೆಸಿತು.

ಕೇಂದ್ರ ಸರಕಾರವು ದೇಶದಾದ್ಯಂತ ಮಾಂಸದ ಉದ್ದೇಶದ ಜಾನುವಾರು ಮಾರುಕಟ್ಟೆಯಲ್ಲಿ ದನ ಹಾಗೂ ಎಮ್ಮೆಗಳ ಮಾರಾಟ ನಿಷೇಧಿಸಿ ಅಧಿಸೂಚನೆ ಹೊರಡಿಸಿದೆ. ಇದೊಂದು ಎನ್.ಡಿ.ಎ. ಸರಕಾರದ ವಿವೇಚನಾರಹಿತ ಕ್ರಮ. ಜನರ ಆಹಾರ ಹಕ್ಕನ್ನು ಕಸಿಯುವ ಒಂದು ಪ್ರಯತ್ನ ಎಂದು ಖಂಡಿಸಿದರು.

ಜಾನುವಾರುಗಳ ರಕ್ಷಣೆ ಎಂಬುದು ಕೇಂದ್ರ ಸರಕಾರ ಮುಸ್ಲಿಂ ಮತ್ತು ದಲಿತರ ಮೇಲೆ ನಡೆಸುತ್ತಿರುವ ಯುದ್ಧವಾಗಿದೆ. ಗುಜರಾತಿನ ಉನಾದಲ್ಲಿ ದಲಿತರ ಮೇಲಿನ ಭೀಕರ ಥಳಿತ ಹಾಗೂ ರಾಜಸ್ತಾನದಲ್ಲಿ ಪೆಹಲೂ ಖಾನ್ ಅವರನ್ನು ಥಳಿಸಿ ಕೊಂದ ಘಟನೆಗಳೇ ಇದಕ್ಕೆ ಸಾಕ್ಷಿ ಎಂದು ದೂರಿದರು.

(-4ನೇ ಪುಟಕ್ಕೆ)

## ಯಾಂತ್ರೀಕೃತ ಆಲೂಗೆಡ್ಡೆ ಬಿತ್ತನೆ ರೈತರಿಗೆ ವರದಾನ

ಹಾಸನ : ಆಲೂಗಡ್ಡೆ ಹಾಸನ ಜಿಲ್ಲೆಯ ಪ್ರಮುಖ ತೋಟಗಾರಿಕೆ ಬೆಳೆಯಾಗಿದೆ. ಸಾಮಾನ್ಯವಾಗಿ ಬಿತ್ತನೆ ಸಮಯದಲ್ಲಿ ಕೃಷಿ ಕಾರ್ಮಿಕರ ಕೊರತೆ ಉಂಟಾಗುತ್ತದೆ. ಈ ನಿಟ್ಟಿನಲ್ಲಿ ಯಾಂತ್ರೀಕೃತ ಆಲೂಗೆಡ್ಡೆ ಬಿತ್ತನೆಯು ರೈತರಿಗೆ ವರದಾನವಾಗಲಿದೆ ಎಂದು ಕೃಷಿ ಮಹಾವಿದ್ಯಾಲಯದ ನೂತನ ಡೀನ್ ಡಾ.ದೇವಕುಮಾರ್ ತಿಳಿಸಿದರು.

ಕೃಷಿ ಮಹಾವಿದ್ಯಾಲಯ, ಮಡೆನೂರು, ಕೃಷಿ ಸಂಶೋಧನಾ ಕೇಂದ್ರ, ಜೈವಿಕ ಉದ್ಯಾನವನ ಹಾಗೂ ಚಿತ್ರದುರ್ಗದ ವರ್ಷ ಅಸೋಸಿಯೇಟ್ಸ್ ಇವರುಗಳ ಸಂಯುಕ್ತ ಆಶ್ರಯದಲ್ಲಿ ರಾಜ್ಯದಲ್ಲೇ ಪ್ರಥಮ ಬಾರಿಗೆ ತಾಲ್ಲೂಕಿನ ಮಡೇನೂರು ಕೃಷಿ ಮಹಾವಿದ್ಯಾಲಯದ ಕ್ಷೇತ್ರದಲ್ಲಿ ಆಯೋಜಿಸಲಾಗಿದ್ದ ಯಾಂತ್ರೀಕೃತ ಆಲೂಗೆಡ್ಡೆ ಬಿತ್ತನೆ ಪ್ರಾತ್ಯಕ್ಷಿಕೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಕಾರ್ಯಕ್ರಮದಲ್ಲಿ ಚಿತ್ರದುರ್ಗದಿಂದ ಆಗಮಿಸಿದ್ದ ವರ್ಷ ಅಸೋಸಿಯೇಟ್ಸ್‌ನ ತಜ್ಞರುಗಳಾದ ಪರಮೇಶ್ ಹಾಗೂ ಗಂಗಾಧರ್ ಅವರು ಆಲೂಗಡ್ಡೆ ಬಿತ್ತನೆ ಪ್ರಾತ್ಯಕ್ಷಿಕೆಯನ್ನು ಮಾಡಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಹಾಸನ ಕೃಷಿ ಮಹಾವಿದ್ಯಾಲಯದ ನಿವೃತ್ತ ಡೀನ್ ಡಾ.ಬಾಲಕೃಷ್ಣ ಗೌಡ ಮಾತನಾಡಿ, ಟ್ರಾಕ್ಟರ್‌ಗೆ ಅಳವಡಿಸಿಕೊಳ್ಳುವ ಈ ಸಾಧನದ ವೆಚ್ಚವು 1.50 ಲಕ್ಷ ರೂ.ಗಳಾಗಿದ್ದು, 1 ಎಕರೆ ಪ್ರದೇಶದಲ್ಲಿ ಆಲೂಗೆಡ್ಡೆ ಬಿತ್ತನೆಯನ್ನು ಕೇವಲ 45 ನಿಮಿಷಗಳಲ್ಲಿ ಮಾಡುವ ಸಾಮರ್ಥ್ಯ ಹೊಂದಿದೆ. ಜೊತೆಗೆ ಒಂದು ಎಕರೆ ಪ್ರದೇಶದಲ್ಲಿ ಆಲೂಗೆಡ್ಡೆ ಬಿತ್ತನೆಗೆ ಬೇಕಾಗುವ ಸುಮಾರು 15 ಜನ ಕೃಷಿ ಕಾರ್ಮಿಕರ ಕೆಲಸವನ್ನು ಈ ಸಾಧನದಿಂದ ಮಾಡಬಹುದಾಗಿದೆ ಎಂದು ತಿಳಿಸಿದರು.

ಆಲೂಗೆಡ್ಡೆ ಬೇಸಾಯಕ್ಕೆ ಬೇಕಾಗುವ ಬಿತ್ತನೆ ಬೀಜದ ಪ್ರಮಾಣ, ರಸಗೊಬ್ಬರಗಳ ಪ್ರಮಾಣ ಮತ್ತು ಇತರೆ ಬೇಸಾಯ ಕ್ರಮಗಳಲ್ಲಿ ಯಾವುದೇ ವ್ಯತ್ಯಾಸಗಳು ಇರುವುದಿಲ್ಲ ಎಂದು ಭಾಗವಹಿಸಿದ್ದ ಕೃಷಿ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದರು.

ರೈತರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಆಯೋಜಿಸಿದ್ದ ಈ ಪ್ರಾತ್ಯಕ್ಷಿಕೆ ಕಾರ್ಯಕ್ರಮದಲ್ಲಿ ಜೈವಿಕ ಉದ್ಯಾನವನದ ಮುಖ್ಯಸ್ಥ ಡಾ.ಕೆ.ಟಿ. ಪ್ರಸನ್ನ , ಕೃಷಿ ಮಹಾವಿದ್ಯಾಲಯದ ತಜ್ಞರುಗಳಾದ ಡಾ.ಮುನಿಸ್ವಾಮಿಗೌಡ, ಡಾ.ಎನ್.ಉಮಾಶಂಕರ್, ಕ್ಷೇತ್ರಾಧೀಕ್ಷರುಗಳಾದ ಬಿ.ಬಸವರಾಜು ಹಾಗೂ ಡಾ.ಶಶಿಧರ್, ವಿಸ್ತರಣಾ ತಜ್ಞ ಡಾ.ಜಿ. ನಾಗೇಶ್ ಹಾಗೂ ಸ್ಥಳೀಯ ಆಲೂಗಡ್ಡೆ ರೈತರು ಭಾಗವಹಿಸಿದ್ದರು. ರೈತರುಗಳಾದ ರುಕ್ಮಾಂಗದ, ಇಂದ್ರೇಶ್, ರವಿ, ಯೋಗೀಶ್ ಹಾಗೂ ಇನ್ನಿತರರು, ಯಾಂತ್ರೀಕೃತ ಆಲೂಗೆಡ್ಡೆ ಬಿತ್ತನೆ ಪ್ರಾತ್ಯಕ್ಷಿಕೆ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸುವುದರ ಜೊತೆಗೆ ಸಂವಾದದ ಮೂಲಕ ತಮ್ಮ ಅನುಮಾನಗಳನ್ನು ಬಗೆಹರಿಸಿಕೊಂಡರು.

## ಜಿಎಸ್‌ಟಿ ಜಾರಿಗೆ ಬಂದರೆ ತೆರಿಗೆಗೆ ಅನುಕೂಲ




ಹಾಸನ : ಜಿಎಸ್‌ಟಿ ಅನುಷ್ಠಾನಕ್ಕೆ ಬಂದರೆ ಸಮರ್ಪಕ ತೆರಿಗೆ ಪದ್ಧತಿ ಅನುಸರಿಸಲು ಅನುಕೂಲವಾಗಲಿದೆ ಎಂದು ವಾಣಿಜ್ಯ ಇಲಾಖೆಯ ಆಯುಕ್ತ ಚೆಲುವೇಗೌಡ ತಿಳಿಸಿದರು.

ನಗರದ ಶುಭೋದಯ ಸಮುದಾಯ ಭವನದಲ್ಲಿ ರಾಜ್ಯ ಮತ್ತು ಜಿಲ್ಲಾ ವಾಣಿಜ್ಯ ಉದ್ಯಮ ಹಾಗೂ ಕಮರ್ಷಿಯಲ್ ತೆರಿಗೆ ವಿಭಾಗದ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಹಮ್ಮಿಕೊಳ್ಳಲಾಗಿದ್ದ ಸರಕು ಮತ್ತು ಸೇವಾ ತೆರಿಗೆ ಕುರಿತ ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ಜುಲೈ 1ರಿಂದ ಸರಕು ಸೇವೆಗಳ ಮೇಲಿನ ತೆರಿಗೆಯಲ್ಲಿ ಬಹಳಷ್ಟು ಸುಧಾರಣೆ ಕಾಣಲಿದ್ದೇವೆ. ಅದರಲ್ಲೂ ಪರೋಕ್ಷ ತೆರಿಗೆಯಲ್ಲಿ ಬದಲಾವಣೆ ಆಗಲಿದೆ ಎಂದರು.

ಜಿಎಸ್‌ಟಿ ಅನುಷ್ಠಾನಕ್ಕೆ ಬಂದರೆ ಅನೇಕ ಅನುಕೂಲವನ್ನು ಪಡೆಯಬಹುದು. ತೆರಿಗೆ ಸರಿಯಾದ ಸಮಯದಲ್ಲಿ ಪಾವತಿಯಾಗುತ್ತದೆ. ಜಿಎಸ್‌ಟಿಗೆ ಸಂಬಂಧಪಟ್ಟ ತಂತ್ರಜ್ಞಾನವನ್ನು ಅಳವಡಿಸಲು ವಿಳಂಬ ಮಾಡಿದರೆ ಸೂಕ್ತ ಸಮಯದಲ್ಲಿ ತೆರಿಗೆ ರಿಟರ್ನ್ ರೇಟಿಂಗ್ ಕುಗ್ಗುತ್ತದೆ ಎಂದರು.

(-4ನೇ ಪುಟಕ್ಕೆ)